5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲೂ- 11
ಸಿಡಬ್ಲೂ- 12

| | | |
|---|---|---|
| ಸಾಕ್ಷಿ ಹೆಸರು | - | ಡಾಃ ಸತೀಶ್ ಎನ್ ಕೆ |
| ತಂದೆ ಹೆಸರು | - | ಕೆಂಚಪ್ಪ |
| ವಯಸ್ಸು | - | 46 ವರ್ಷ |
| ಉದ್ಯೋಗ | - | ತಜ್ಞ ವೈದ್ಯರು, ಜಿಲ್ಲಾ ಆಸ್ಪತ್ರೆ, ಗದಗ |
| ವಿಳಾಸಃ | - | ಗದಗ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 21-12-2023

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಆಗಸ್ಟ್ 2015 ರಿಂದ ಆಗಸ್ಟ್ 2019 ರ ವರೆಗೆ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ವೈದ್ಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ09-06-2019 ರಂದು ಸಂಜೆ 7-45 ಗಂಟೆ ಸಮಯದಲ್ಲಿ ಚಾಸಾ-2 ಸತೀಶ ಬಿನ್ ಗಣಪತಿ , 28 ವರ್ಷ ಸಾರೇಕೊಪ್ಪ ಗ್ರಾಮ ಇವರನ್ನು ಹೊಡೆದಾಟದ ಗಾಯದ ಹಿನ್ನೆಲೆಯಲ್ಲಿ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆಯಾಗಿ ಗಾಯಗೊಂಡ ಮೇರೆಗೆ ಅವರು ಚಿಕಿತ್ಸೆಗಾಗಿ ಪ್ರಾ ಸಾ -1 ರವರು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಚಾಸಾ-2 ರವರನ್ನು ಪರೀಕ್ಷೆ ಮಾಡಿದಾಗ ಚಾಸಾ-2 ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದು ಅವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1) ರೋಗಿಯು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದು ಇವರಿಗೆ ತಲೆಗೆ ತೀವ್ರವಾಗಿ ಪೆಟ್ಟಾಗಿತ್ತು ಹಾಗೂ ಮೂಗಿನಿಂದ ರಕ್ತಸ್ರಾವವಾಗಿತ್ತು, ತಲೆಯ ಎಡಭಾಗ ಮತ್ತು ಮೇಲ್ಭಾಗವು ಊದಿಕೊಂಡಿತ್ತು.

ಇವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಆಸ್ಪತ್ರೆಯ ವರದಿಯ ಪ್ರಕಾರ ಅವರ ತಲೆಯ ಮೂಳೆಯು ಮುರಿದು ಮೆದುಳಿನಲ್ಲಿ ರಕ್ತಸ್ರಾವವಾಗಿತ್ತು ಎಂದು ತಿಳಿಸಿರುತ್ತಾರೆ. ಮೇಲ್ಕಂಡ ಗಾಯವು ಗಂಭೀರ ಸ್ವರೂಪದ ಗಾಯವಾಗಿತ್ತು. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -12 ಸಾಕ್ಷಿಯ ಸಹಿಯನ್ನು ನಿಪಿ -12(ಎ) ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಕುರಿತಂತೆ ಸೊರಬ ಪೋಲೀಸರು ನನ್ನ ಮುಂದೆ 2 ಹಿಡಿ ಗಾತ್ರದ ಕಲ್ಲು , ಒಂದು ಕಾಡು ಜಾತಿಯ ಕಲ್ಲು, 2.5 **x** 3 ಇಂಚು ಅಗಲದ ಮರದ ರೀಪೀಸ್ ಗಳನ್ನು ಹಾಜರುಪಡಿಸಿ ಈ ಆಯುಧಗಳಿಂದ ಸದರಿ ಗಾಯಗಳು ಆಗುವುದಾ ಎಂದು ಅಭಿಪ್ರಾಯ ಕೇಳಿದ್ದು ಅವುಗಳನ್ನು ನಾನು ಪರೀಕ್ಷಿಸಿ ಆಗುವ ಸಾಧ್ಯತೆ ಇದೆ ಎಂದು ನಾನು ಅಭಿಪ್ರಾಯ ಕೊಟ್ಟಿರುತ್ತೇನೆ. ಸದರಿ ಅಭಿಪ್ರಾಯವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -13 ಸಾಕ್ಷಿಯ ಸಹಿಯನ್ನು ನಿಪಿ -13(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಸದರಿ ಕಲ್ಲುಗಳನ್ನು ತೋರಿಸಿದ್ದು ಅವುಗಳನ್ನು ಈಗಾಗಲೇ ಮು ಮಾ -1 ಮತ್ತು ಮು ಮಾ -2 ಎಂದು ಗುರುತಿಸಲಾಗಿದೆ, ಮರದ ರೀಪೀಸ್ ನ್ನು ಈಗಾಗಲೇ ಮು ಮಾ -3 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಸಾಕ್ಷಿಗೆ ದಿನಾಂಕಃ15-02-2023 ರಂದು ನೀಡಿದಂತಹ ಪತ್ರವನ್ನು ತೋರಿಸಿದ್ದು ಸದರಿ ಪತ್ರ ನಮ್ಮ ಆಸ್ಪತ್ರೆಯಿಂದ ನೀಡಿದ ದಾಖಲೆ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ -1 ಎಂದು ಗುರುತಿಸಲಾಯಿತು. ಚಾಸಾ-2 ರವರಿಗೆ ಚಿಕಿತ್ಸೆ ನೀಡಿದಂತಹ

ದಿನಾಂಕದಂದು 1 ನೇ ಆರೋಪಿಗೆ ಸಹ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದೇನೆ ಎಂದರೆ ನನಗೆ ಈ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಈ ದಿನ ಕೇಸ್ ಡೈರಿಯನ್ನು ತಂದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಪ್ರಕಾರ 1 ನೇ ಆರೋಪಿಗೆ ನಮ್ಮ ಆಸ್ಪತ್ರೆಯಿಂದ ಸಾಗರ ಆಸ್ಪತ್ರೆಗೆ ದಿನಾಂಕಃ09-06-2019 ರಂದು ರೆಫರ್ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಆಸ್ಪತ್ರೆ ದಾಖಲೆ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

ಸದರಿ ದಾಖಲೆಯಲ್ಲಿ ಕಂಡು ಬರುವ ಸೀಲ್ ಸಾಗರ ಆಸ್ಪತ್ರೆಯದ್ದಾಗಿದ್ದು ಸದರಿ ದಾಖಲೆಯನ್ನು ಸಾಗರ ಆಸ್ಪತ್ರೆಯಿಂದ ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನಿಡಿ -2 ಎಂದು ಗುರುತಿಸಲಾಯಿತು.

ತಲೆಗೆ ಗಾಯ ಆದರೆ ಮೂಗಿನಿಂದ ರಕ್ತ ಬರುತ್ತದೆ ಎಂದರೆ ಹೌದು. ಚಾಸಾ-2 ರವರಿಗೆ ನಾನು ಹೇಳಿದಂತಹ ತಲೆಯ ಗಾಯವು ಜೆ ಸಿ ಬಿ ಬಕೆಟ್ ತಲೆಗೆ ತಾಗಿದಾಗ ಆಗುವ ಸಾಧ್ಯತೆ ಇದೆ ಎಂದರೆ ಆಗಬಹುದು ಎಂದು ನುಡಿಯುತ್ತಾರೆ. ಚಾಸಾ-2 ರವರಿಗೆ ಆದಂತಹ ಗಾಯಗಳು ಮು ಮಾ -1 ರಿಂದ ಮು ಮಾ -3 ರಲ್ಲಿ ಯಾವುದರಲ್ಲಿ ಹೊಡೆದರೂ ಆಗುವ ಸಾಧ್ಯತೆ ಇದೆ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).